ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

ಫೆಬ್ರುವರಿ 10, 2012

**ಮಾನ್ಯಶ್ರೀ ಸದಾನಂದ ಗೌಡರವರೇ,**

ನಿಮ್ಮೊಂದಿಗೆ ನಾನು ಈ ಹಿಂದಿನ ಸಭೆಗಳಲ್ಲಿ ಚರ್ಚಿಸಿದಂತೆ, ಅಭಿವೃದ್ಧಿಯ ಹೆಸರಿನಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ನಮ್ಮ ನೆರೆಹೊರೆಯನ್ನು ಹೇಗೆ ನಾಶಪಡಿಸುತ್ತಿವೆ ಎಂಬುದರ ಬಗ್ಗೆ ನನಗೆ ಹಲವು ನಿವಾಸಿಗಳ ಕಲ್ಯಾಣ ಸಂಘಗಳು ನನ್ನ ಗಮನಕ್ಕೆ ತಂದಿವೆ. ಸ್ಥಳೀಯ ನಿವಾಸಿಗಳನ್ನು ಸಂಪರ್ಕಿಸದೇ, ಅವರ ಒಪ್ಪಿಗೆಯನ್ನು ಪಡೆಯದೇ ಮಾಡುವ ಅಭಿವೃದ್ಧಿ ಮಾದರಿಯನ್ನು ಸಾರ್ವಜನಿಕ ಸೇವೆಯಲ್ಲಿ ನಂಬಿಕೆ ಇಟ್ಟಿರುವ ಸರ್ಕಾರ ಒಪ್ಪುವುದಿಲ್ಲ ಎಂಬುದನ್ನು ನೀವು ಒಪ್ಪಿಕೊಳ್ಳುತ್ತೀರಿ ಎಂದು ಭಾವಿಸಿದ್ದೇನೆ.

ಸಿಟಿಜನ್ ಆಕ್ಷನ್ ಫೋರಮ್ (ಸಿಎಎಫ್) ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ವಿಚಾರಣೆ ನಡೆಸಿದ ಕರ್ನಾಟಕ ಹೈಕೋರ್ಟ್ ಇತ್ತೀಚೆಗೆ ಜನನಿವಾಸದ ಪ್ರದೇಶಗಳಲ್ಲಿ ಎಲ್ಲಾ ರೀತಿಯ ವಾಣಿಜ್ಯ ಚಟುವಟಿಕೆಗಳನ್ನು ಸ್ಥಗಿತಗೊಳಿಸುವಂತೆ ಆದೇಶ ನೀಡಿರುವುದು ನಿಮಗೆ ಗೊತ್ತಿರಬಹುದು.

ಜನರ ವಾಸಕ್ಕೆ ಯೋಗ್ಯವಾದ ಸ್ಥಳ ಎಂಬ ಹೆಗ್ಗಳಿಕೆಯ ಸುದೀರ್ಘ ಇತಿಹಾಸ ಬೆಂಗಳೂರಿಗೆ ಇದೆ. ಸುರಕ್ಷಿತ, ಆಕರ್ಷಕ ಮತ್ತು ಆರಾಮದಾಯ ನಗರ ಎಂಬ ಪ್ರಶಂಸೆ ಈಗ ಅಪಾಯದಲ್ಲಿದೆ. ಪ್ರಮುಖವಾದ ವಿಷಯಗಳು ಮತ್ತು ಸವಾಲುಗಳನ್ನು ನಿಭಾಯಿಸುವಾಗ ಸ್ಥಳೀಯ ಸಮುದಾಯವನ್ನು ತೊಡಗಿಸಿಕೊಳ್ಳುವುದರಿಂದ ಹಿಂದಿನ ಹೆಗ್ಗಳಿಕೆಯನ್ನು ಮತ್ತೆ ಅನುಷ್ಠಾನಕ್ಕೆ ತರಬಹುದು. ಬೆಂಗಳೂರಿನ ನಿವಾಸಿಗಳು ವ್ಯಕ್ತಪಡಿಸುವ ಆದ್ಯತೆಗಳನ್ನು ಆಧಾರವಾಗಿಟ್ಟುಕೊಂಡು ನಗರವನ್ನು ಅಭಿವೃದ್ಧಿಪಡಿಸಬೇಕು. ಸಮುದಾಯಗಳಲ್ಲಿ ಇದು ನಮ್ಮ ನಗರ ಎಂಬ ಭಾವನೆಯನ್ನು ಬೆಳೆಸುವುದರಿಂದ ಮತ್ತು ಪೋಷಿಸುವುದರಿಂದ ಹಲವು ಅನುಕೂಲಗಳಿವೆ. ಸಂಕೀರ್ಣವಾದ ಸಮಸ್ಯೆಗಳನ್ನು ನಿಭಾಯಿಸಬಹುದು. ಸುರಕ್ಷಿತ ಮತ್ತು ಸುಭದ್ರತೆಯ ಭಾವನೆಯನ್ನು ಮೂಡಿಸಬಹುದು. ವಿವಿಧ ಬಗೆಯ ಕನಸುಗಳನ್ನು ಕಾಣಬಹುದು. ತಮ್ಮ ನೆರೆಹೊರೆ ಮತ್ತು ತಾವಿರುವ ಪ್ರದೇಶಗಳಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಾಗುತ್ತಿಲ್ಲ ಎಂಬ ಕಾರಣಕ್ಕೆ ನಾಗರಿಕರು ಹತಾಶರಾಗಿದ್ದಾರೆ.

... 2 ..

11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham: VU2RCL

ಪ್ರತಿಯೊಂದು ಯಶಸ್ವಿ ಆಧುನಿಕ ನಗರದಲ್ಲಿ ಪಾರದರ್ಶಕತೆ ಮತ್ತು ನಾಗರಿಕರ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಲಾಗುತ್ತಿದೆ. ನಾಗರಿಕರು ಇಲ್ಲಿ ಪ್ರಬಲವಾದ ಪಾತ್ರ ವಹಿಸುತ್ತಿದ್ದಾರೆ. ತಮ್ಮ ಮನೆ ಮತ್ತು ಕೆಲಸದ ಸ್ಥಳಗಳಲ್ಲಿ ಅಭಿವೃದ್ಧಿಯ ದಿಕ್ಕನ್ನು ನಿರ್ಧರಿಸುತ್ತಾರೆ. ಬೆಂಗಳೂರಿನಲ್ಲಿಯೂ ನಾವಿದನ್ನು ಕಡ್ಡಾಯವಾಗಿ ಅನುಸರಿಸಬೇಕು.

ಹಾಗಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಮನವಿ ಮಾಡುತ್ತೇನೆ:

1. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ಅಬೈಡ್ ಈಗಾಗಲೇ 2020 ಬೆಂಗಳೂರು ಯೋಜನಾ ವರದಿಯನ್ನು ೨೦೦೯ರ ಜನವರಿಯಲ್ಲಿಯೇ ಸಲ್ಲಿಸಿದ್ದು, ಇದು ನಗರದ ಸಮಗ್ರ ಅಭಿವೃದ್ಧಿಯ ನೀಲನಕ್ಷೆಯನ್ನು ಒದಗಿಸುತ್ತದೆ. ಇದನ್ನು ಜಾರಿಗೆ ತರಬೇಕು ಎಂದು ನಾನು ಮನವಿ ಮಾಡುತ್ತೇನೆ. ಇದು ನಗರವನ್ನು ಮತ್ತೆ ಸರಿಯಾದ ಮಾರ್ಗದಲ್ಲಿ ತಂದು ನಿಲ್ಲಿಸಲಿದ್ದು, ಸುಸ್ಥಿರ ಅಭಿವೃದ್ಧಿಯ ಮಾದರಿ ಎನಿಸಲಿದೆ.
2. 'ಸರ್ಕಾರಿ ಸಂಸ್ಥೆಗಳು ಕೈಗೊಳ್ಳುವ ಬೆಂಗಳೂರು ಮೂಲಸೌಕರ್ಯ ಯೋಜನೆಗಳ ಅಗತ್ಯ ತತ್ವಗಳು' ಎಂಬ ಟಿಪ್ಪಣಿಯನ್ನು ನಿಮ್ಮ ಅವಗಾಹನೆಗಾಗಿ ಇಲ್ಲಿ ಲಗತ್ತಿಸಲಾಗಿದೆ. ನಿವಾಸಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಬೆಂಗಳೂರಿನ ಸುಸ್ಥಿರ ಅಭಿವೃದ್ಧಿಯನ್ನು ಖಾತ್ರಿಪಡಿಸಲು ಎಲ್ಲಾ ಸರ್ಕಾರಿ ಸಂಸ್ಥೆಗಳು/ ಇಲಾಖೆಗಳೂ ಈ ತತ್ವಗಳನ್ನು ಅನುಸರಿಸಬೇಕು ಎಂದು ನಿರ್ದೇಶನ ನೀಡುವಂತೆ ನಿಮ್ಮಲ್ಲಿ ವಿನಂತಿಸುತ್ತೇನೆ.

ಇಂತಹ ಕ್ರಮಗಳು ಜನರ ವಿಶ್ವಾಸವನ್ನು ಹೆಚ್ಚಿಸಲಿದ್ದು, ಸರ್ಕಾರ ಕೈಗೊಳ್ಳುವ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಬೆಂಬಲ ನೀಡುವಂತೆ ಮಾಡಲಿದೆ ಎಂಬ ಭರವಸೆ ನನಗಿದೆ. ಈ ವಿಷಯದಲ್ಲಿ ನಿಮ್ಮ ತುರ್ತು ಕ್ರಮಗಳನ್ನು ನಾನು ಎದುರು ನೋಡುತ್ತೇನೆ.

ತಮ್ಮ ವಿಶ್ವಾಸಿ

**ರಾಜೀವ್ ಚಂದ್ರಶೇಖರ್**

**ಶ್ರೀ ಡಿ.ವಿ. ಸದಾನಂದಗೌಡ**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ, ವಿಧಾನಸೌಧ
ಬೆಂಗಳೂರು.